MVC-570/2024 ಪಿ.ಡಬ್ಲ್ಯೂ-1 (ಲಿಂಗರಾಜು)

ದಿನಾಂಕಃ **17.04.2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಅರ್ಜಿದಾರರ ಪರ ಶ್ರೀ.CRD ವಕೀಲರಿಂದ :**

(ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ, ಸದರಿ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳನ್ನು ಓದಿಸಿ, ಕೇಳಿ ತಿಳಿದುಕೊಂಡು ಸರಿ ಮತ್ತು ಸತ್ಯವಾಗಿರುತ್ತವೆ ಎಂದು ಸಹಿ ಮಾಡಿರುವುದಾಗಿ ತಿಳಿಸಿರುತ್ತಾರೆ.)

ಪೊಲೀಸರು ಸಲ್ಲಿಸಿದ ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲನ್ನು **ನಿಪಿ-1** ಎಂದು, ದೂರಿನ ದೃಢೀಕೃತ ನಕಲನ್ನು **ನಿಪಿ-2** ಎಂದು, ಸ್ಥಳ ಮಹಜರ್ ನ ಮತ್ತು ಕಚ್ಚಾ ನಕಾಶೆಯ ದೃಢೀಕೃತ ನಕಲನ್ನು ಒಟ್ಟಾಗಿ **ನಿಪಿ-3** ಎಂದು, 2 ಅಮಾನತ್ತು ಮಹಜರ್ ನ ದೃಢೀಕೃತ ನಕಲುಗಳನ್ನು **ನಿಪಿ-4 ಮತ್ತು 5** ಎಂದು, ಗಾಯದ ಪ್ರಮಾಣ ಪತ್ರವನ್ನು **ನಿಪಿ-6** ಎಂದು, ಐಎಂವಿ ವರದಿಯ ದೃಢೀಕೃತ ನಕಲನ್ನು **ನಿಪಿ-7** ಎಂದು, ಚಾರ್ಜ್ ಶೀಟ್ ನ ದೃಢೀಕೃತ ನಕಲನ್ನು **ನಿಪಿ-8** ಎಂದು, 2 ಗಣಕೀಕೃತ ಆರ್.ಟಿ.ಸಿ.ಗಳನ್ನು ಕ್ರಮವಾಗಿ **ನಿಪಿ-9 ಮತ್ತು 10** ಎಂದು, Discharge Summary ಅನ್ನು **ನಿಪಿ-11** ಎಂದು, 23 ಮೆಡಿಕಲ್ ಬಿಲ್ಲುಗಳನ್ನು ಒಟ್ಟಾಗಿ **ನಿಪಿ-12** ಎಂದು, 1 ಔಷಧಿ ಚೀಟಿಗಳನ್ನು **ನಿಪಿ-13** ಎಂದು ಗುರುತಿಸಲಾಯಿತು.

**ಅರ್ಜಿದಾರರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿರುತ್ತಾರೆ. ಕೋರಿಕೆ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

**1 ನೇ ಅಪರ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

ಸಾಕ್ಷಿದಾರರ ಸಹಿ.